ಕರ್ನಾಟಕ ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ರವರ ಕಛೇರಿ**

4ನೇ ಮಹಡಿ, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

**Office of the Principal Chief Conservator of Forests (Head of Forest Force)**

**4th Floor, Aranya Bhavan, 18th Cross, Malleshwaram, Bengaluru – 560003**

**Phone No.: 080-23347008 Email:-apccfworkingplan@gmail.com**

---

ಸಂಖ್ಯೆ: ಕೆ.ಎಫ್.ಡಿ/ಡಬ್ಲ್ಯೂ.ಪಿ/ಆರ್.ಎಫ್.ಓ(ಜಿ.ಐ.ಎಸ್)/2/2018 ದಿನಾಂಕ: 06.09.2022

**ಸುತ್ತೋಲೆ**

ವಿಷಯ: ಅರಣ್ಯ ಪ್ರದೇಶಗಳ ಗಡಿ ನಿರ್ಣಯದ ಬಗ್ಗೆ.

******

ಇತ್ತೀಚಿನ ದಿನಗಳಲ್ಲಿ ಅರಣ್ಯ ಗಡಿಗಳನ್ನು ಗಸ್ತುಮಾಡುವಾಗ ಅಥವಾ ಗಡಿ-ವ್ಯಾಜ್ಯ ಪ್ರಕರಣಗಳಲ್ಲಿ ನೀತಿ ಸಂಹಿತೆಯಂತೆ ಗಡಿ ನಿರ್ಣಯಿಸುವಾಗ ಅನೇಕ ಅಧಿಕಾರಿ/ಸಿಬ್ಬಂದಿಗಳು ಕಂದಾಯ ಇಲಾಖೆಯು ಸಿದ್ದಪಡಿಸಿ ಪ್ರಚುರ ಪಡಿಸಿರುವ "ದಿಶಾಂಕ್" "Dishank Mobile App" ತಂತ್ರಾಂಶವನ್ನು ಉಪಯೋಗಿಸುತ್ತಿರುವುದು ತಿಳಿದುಬಂದಿರುತ್ತದೆ. ಆದರೆ, ಸದರಿ ತಂತ್ರಾಂಶವನ್ನು ಕೇವಲ ಸರ್ವೆ ನಂಬರ್‌ಗಳನ್ನು ತಿಳಿದುಕೊಳ್ಳಲು ಉಪಯೋಗಿಸಲು ಸೂಕ್ತವಾಗಿರುತ್ತದೆಂದು, ಯಾವುದೇ ಕಾನೂನಾತ್ಮಕವಾದ ಗಡಿ ನಿರ್ಧರಣೆಗಳಲ್ಲಿ ಉಪಯೋಗಿಸಲು ತಕ್ಕದಲ್ಲವೆಂಬ ನಿರ್ಬಂಧದೊಂದಿಗೆ ತಂತ್ರಾಂಶವು ಸಾರ್ವಜನಿಕವಾಗಿ ಲಭ್ಯವಿರುತ್ತದೆ.

ಇಲಾಖೆಯಲ್ಲಿ Geo Spatial Forest Information System ಎಂಬ ಅರಣ್ಯ ಪ್ರದೇಶಗಳ ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು Karnataka State Remote Sensing Application Center ಹಾಗೂ Regional Remote Sensing Center, (South) ರವರ ಸಹಯೋಗದೊಂದಿಗೆ ಸಿದ್ದಪಡಿಸಲಾಗಿದೆ. ಅಧಿಕೃತ ಅಧಿಸೂಚನೆಗಳಲ್ಲಿನ ಗಡಿ ವಿವರಣೆ ಮಾಹಿತಿಯನ್ನು ಕೃಢೀಕರಿಸಿ ಕಂದಾಯ ಇಲಾಖೆಯ ಗ್ರಾಮ ನಕ್ಷೆಗಳೊಂದಿಗೆ ಸಂಯೋಜಿಸಿ ಆಡಳಿತ ವ್ಯಾಪ್ತಿಯ ಅಧಿಕಾರಿಗಳಿಂದ (Jurisdictional Officers) ಅಧಿಕೃತವಾಗಿ ದೃಡೀಕರಿಸಿದ ಮಾಹಿತಿಯನ್ನು GSFIS/Aranya Bhoomi Mobile App ತಂತ್ರಾಂಶದಲ್ಲಿ ಅಳವಡಿಸಲಾಗಿದೆ. ಸದರಿ Mobile App ತಂತ್ರಾಂಶವನ್ನು ಕ್ಷೇತ್ರಾಧಿಕಾರಿ/ಸಿಬ್ಬಂದಿಗಳಿಗೆ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಉಪಯೋಗಿಸಲು ಒದಗಿಸಲಾಗಿರುತ್ತದೆ.

ಅರಣ್ಯ ಗಡಿಗಳ ಮಾಹಿತಿಯನ್ನು ಯಥಾವತ್ ಕಂದಾಯ/ಗ್ರಾಮ ನಕ್ಷೆಗಳಲ್ಲಿ ತೋರ್ಪಡಿಸುವುದರಿಂದ ಸ್ಥಳ ಪರಿಶೀಲನೆ ಕಾರ್ಯವನ್ನು /ನಿರ್ಧರಣೆ ಕಾರ್ಯವನ್ನು ಕೈಗೊಳ್ಳುವಾಗ "ಅರಣ್ಯ ಭೂಮಿ" ತಂತ್ರಾಂಶವನ್ನು ಕಡ್ಡಾಯವಾಗಿ ಉಪಯೋಗಿಸಿ, ಕ್ಷೇತ್ರದಲ್ಲಿ ಅರಣ್ಯ ಪ್ರದೇಶಗಳ ಗಡಿ ನಿರ್ಣಯಕ್ಕೆಸಂಬಂಧಿಸಿದ ಎಲ್ಲಾ ರೀತಿಯ ಪ್ರಕರಣಗಳ ಇತ್ಯರ್ಥಪಡಿಸಲು ಸೂಚಿಸಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು.